ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ಸೊಸೈಟಿಗಳ ಆಡಿಟ್ ಮಾಡತಕ್ಕ ಸಿಬ್ಬಂದಿಯನ್ನು ಜಾಸ್ತಿ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚಾಗುವುದಿಲ್ಲ. ಅದ್ದರಿಂದ ಇಷ್ಟು ಸಾವಿರಾರು ಸೊಸೈಟಿಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡದೆ ಅವರಿಂದ ಸರಿಯಾಗಿ ಲೆಕ್ಕಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಆಗದಿರುವ ಹಾಗೆ ಏಕೆ ಮಾಡ್ತಿದ್ದೀರಿ ?

ಶ್ರೀ ಪಿ. ಎಂ. ನಾಡಗೌಡ.—ಆಡಿಟ್ ಮಾಡಲು ಜನರಲ್ ಬಾತಿ ಎಸ್ಟಾಬ್ಲಿಷ್‌ಮೆಂಟ್ ಮಾಡಬೇಕು ಎಂದೇನಿಲ್ಲ. ಜನರಲ್ ಬಾತಿ ಎಸ್ಟಾಬ್ಲಿಷ್‌ಮೆಂಟ್ ಮಾಡಬೇಕಾದರೆ ಸ್ವಲ್ಪಮಟ್ಟಿಗಾದರೂ ಆಡಿಟ್ ಮಾಡಿದ್ದರೆ, ಅದನ್ನು ಗಣನೆಗೆ ತೆಗೆದುಕೊಂಡು ಮಾಡುತ್ತಾರೆ.

Disposal of Loan Application

*Q.—85. **Sri H. D. DEVE GOWDA** (Holenarasipur).—

Will the Minister for Revenue and Forests be pleased to state:

(*a*) the number of loan applications pending without sanction for want of funds brought under 'Takavi' and 'Land Improvement' Head in Holenarasipur taluk, Hassan district;

(*b*) the amount required to dispose of the same;

(*c*) the amount required to make full payment for the II instalment of Land Improvement Loan cases?

A.—**Sri B. RACHAIAH** (Minister for Revenue and Forests).—

(*a*) 443. Statement attached.
(*b*) Rs. 1,50,000 *Vide* statement appended.
(*c*) Rs. 4,375.

STATEMENT

Showing the loan applications pending in Holenarasipur taluk.

Sl. No.	Name of the hobli	Number of applications pending	Amount required	Number of applications pending	Amount required
		Takavi loan		Land Improvement loan	
1	Kasaba	28	8,000	8	4,000
2	Halekote	83	24,000	23	12,000
3	Hallimysore	233	68,000	68	34,000
	Total ...	344	1,00,000	99	50,000

ಶ್ರೀ ಎಚ್. ಡಿ. ದೇವೇಗೌಡ.—ಈ ವರ್ಷದಲ್ಲಿ ಇನ್ನುಳಿದಿರುವ ಅರ್ಜಿದಾರರಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—3 ತಿಂಗಳ ಬಡ್ಜೆಟ್ ಪಾಸ್ ಆದಮೇಲೆ ಸ್ವಲ್ಪ ಕೊಟ್ಟಿದ್ದೇವೆ. ಈಗ ಈ ಬಡ್ಜೆಟ್ ಪಾಸ್ ಆದಮೇಲೆ ಉಳಿದವರಿಗೂ ಹಣವನ್ನು ಸಾಲವಾಗಿ ಕೊಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಮಂತ್ರಿಗಳು ಈಗ ಬಡ್ಜೆಟ್ ಪಾಸ್ ಆದಮೇಲೆ ಉಳಿದವರೆಲ್ಲರಿಗೂ ಪೂರ್ತಿಯಾಗಿ ಹಣವನ್ನು ಕೊಡುತ್ತೇವೆಂದು ಹೇಳಿದರು. ಅಯಾಡಿವಿಜನಲ್ ಕಮೀಷನರ್ ಅವರು 2-3 ಸಾವಿರ ರೂಪಾಯಿಗಳಂತೆ ಕೊಡುತ್ತಾ ಹತ್ತಾರು ತಿಂಗಳುಗಳ ಕಾಲವಾದರೂ ಅವನ್ನು ಇತ್ಯರ್ಥಮಾಡದೇ ಇರುವುದರಿಂದ ಅನೇಕ ಅರ್ಜಿಗಳು ಸುಮಾರು ಒಂದು ವರ್ಷದಿಂದಲೂ ಪೆಂಡಿಗ್‌ನಲ್ಲಿರುತ್ತದೆ. ಮಾನ್ಯ ಮಂತ್ರಿಗಳು ಅಲ್ಲಿನ ಸ್ಥಳ, ಸನ್ನಿವೇಶಗಳನ್ನು ತಿಳಿದುಕೊಂಡು ಬಂದಿದ್ದಾರೆ. ಕಳೆದಸಾರಿಯೂ ಹಣವನ್ನು ಒದಗಿಸಲಾಗಿದ್ದರೂ ಸರಿಯಾಗಿ ವಿತರಣೆಯಾಗಿಲ್ಲ. ಆದ್ದರಿಂದ ಈಗಲಾದರೂ ಇರತಕ್ಕ ಪೂರ್ತಿ ಅರ್ಜಿಗಳನ್ನು ಪರಿಶೀಲಿಸಿ ಈ ಒಂದು ಲಕ್ಷ 50 ಸಾವಿರ ರೂಪಾಯಿಗಳನ್ನು ಎಲ್ಲರಿಗೂ ಕೊಡುವ ವ್ಯವಸ್ಥೆಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈಗಿನ ಬಡ್ಜೆಟ್ ಪ್ರಾವಿಷನ್ನಿನಲ್ಲಿ ಕಡಿಮೆ ಹಣವನ್ನು ಒದಗಿಸಿದೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಗೂ ಕೊಟ್ಟ ಹಣದಲ್ಲಿ ಡೆಪ್ಯುಟಿ ಕಮಿಷನರವರು ತಾಲ್ಲೂಕುವಾರು ಹಂಚುತ್ತಾರೆ. ಈಗ ಎಷ್ಟು ಸಾಧ್ಯವೋ ಅಷ್ಟನ್ನು ಕೊಡುವುದಕ್ಕಾಗುತ್ತದೆ. ಆದರೆ ಎಲ್ಲಾ ಅರ್ಜಿದಾರರಿಗೆ ಈಗಲೇ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಫಂಡ್ಸ್ ಎಷ್ಟಿದೆಯೋ ಅಷ್ಟು ಕೊಡುತ್ತೆವೆಂದು ತಮ್ಮ ಕಷ್ಟವನ್ನು ಹೇಳುತ್ತೀರಿ. ಇದರ ಬಗ್ಗೆ ತಾಲ್ಲೂಕು ಆಫೀಸಿಗೆ ಒಂದು ಸರ್ಕ್ಯುಲರ್ ಇಷ್ಯೂ ಮಾಡಿ ಇಷ್ಟೇ ಸಾಲದ ಅರ್ಜಿಗಳನ್ನು ಪರಿಶೀಲಿಸುತ್ತೇವೆಂದು ಹೇಳಬೇಕು. ಏಕೆಂದರೆ ಒಂದೊಂದು ಸಾಲದ ಅರ್ಜಿಗೂ ಸುಮಾರು 50-60 ರೂಪಾಯಿಗಳವರೆಗೂ ಖರ್ಚು ಆಗುತ್ತದೆ. ಆರ್. ಆರ್. ಓ. ಐ. ಸಿ. ಓ. ಮತ್ತು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಮತ್ತು ಇತರ ರೆವಿನ್ಯೂ ದಾಖಲಾತಿಗಳನ್ನು ಕೊಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆ. ಆದ್ದರಿಂದ ಸುಮ್ಮನೆ ಅರ್ಜಿಗಳನ್ನು ರೈತರಿಂದ ತರಿಸಿಕೊಂಡು ಅನಾವಶ್ಯಕವಾಗಿ ಅವರಿಗೆ ಖರ್ಚುಮಾಡಿಸುವುದಕ್ಕಿಂತ ಅದರ ಬದಲಾಗಿ ಇರತಕ್ಕ ಅರ್ಜಿಗಳೆಲ್ಲಾ ತೀರ್ಮಾನವಾಗುವವರೆಗೂ ಅವರಿಗೆ ಏನಾದರೂ ಪರಿಹಾರ ಕಂಡುಹಿಡಿಯಬೇಡವೇ ?

ಶ್ರೀ ಜಿ. ಬಿ. ಶಂಕರರಾವ್.—ಸಾಲದ ಬಗ್ಗೆ ಬೇಡಿಕೆ ರೈತರಿಂದ ಬೇಕಾದಷ್ಟು ಇದೆ. ಆದರೆ ಬಂದಂಥ ಅರ್ಜಿಗಳೆಲ್ಲಾ ಸರಿಯಾಗಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಅಲ್ಲದೆ ಸಂಬಂಧಪಟ್ಟ ರೆವಿನ್ಯೂ ದಾಖಲಾತಿಗಳು, ಸೆಕ್ಯೂರಿಟಿ, ಸಾಲ್ವೆನ್ಸಿ ಇವೆಲ್ಲಾ ಕೊಡುವುದಕ್ಕೆ ಮುಂಚೆ ಯಾರೂ ಅರ್ಜಿಗಳನ್ನು ಕೊಡಬಾರದೆಂದು ಹೇಳುವುದಕ್ಕೂ ಆಗುವುದಿಲ್ಲ. ಸಾಲಗಳನ್ನೇನೋ ಪ್ರೈಯಾರಿಟಿ ಮೇಲೆ ಕೊಡುತ್ತೇವೆ.

ಶ್ರೀ ಬಾಪುಗೌಡ.—ರೆವಿನ್ಯೂ ಮುಖಾಂತರ ಕೊಡುವ ತಕಾವಿ ಹಣದಿಂದ ವಿಶೇಷವಾಗಿ ಒಕ್ಕಲಿಗರಿಗೆ ಹೆಚ್ಚು ದುರುಪಯೋಗವಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಶ್ರೀ ಜಿ. ಬಿ. ಶಂಕರರಾವ್.—ಅಂಥಾದ್ದು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ರೈತ ತಕಾವಿ ಸಾಲಕ್ಕಾಗಿ ಅರ್ಜಿ ಹಾಕುವಾಗ ಆರ್. ಆರ್. ಓ. ಐ. ಸಿ. ಓ. ಮತ್ತು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಎಲ್ಲವನ್ನೂ ಕೊಡಬೇಕೆಂದು ಕೇಳುತ್ತಾರೆ. ಸರ್ಕಾರದ ಪತಿಯಲ್ಲಿರತಕ್ಕ ಸರ್ಟಿಫೈಡ್ ಕಾಪಿಗಳನ್ನು ನೋಡಿ ಸರ್ಕಾರದವರು ರೈತ ಅರ್ಜಿಕೊಟ್ಟ ಮೇಲೆ ಅವನ್ನೆಲ್ಲಾ ಪರಿಶೀಲನೆಮಾಡುವುದಕ್ಕೆ ಅವಕಾಶವಿಲ್ಲವೇ ?

ಶ್ರೀ ಜಿ.ಬಿ. ಶಂಕರರಾವ್.—ರೈತ ಅರ್ಜಿಕೊಟ್ಟಮೇಲೆ ರೆವಿನ್ಯೂ ಇನ್‌ಸ್ಪೆಕ್ಟರು ಎಲ್ಲ ರಿಕಾರ್ಡುಗಳನ್ನೂ ಬಿರ್ಡ್‌ಪ್ ಮಾಡುತ್ತಾರೆ. ಕೆಲವು ದಾಖಲಾತಿಗಳ ಬಗ್ಗೆ ನಾವೇ ಸಬ್ ರಿಜಿಸ್ಟ್ರಾರ್ ಅವರ ಆಫೀಸಿಗೆ ಬರೆಯುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸಾಲದ ಅರ್ಜಿಗಳನ್ನೆಲ್ಲಾ ಪರಿಶೀಲನೆ ಮಾಡುವಾಗ ಎಲ್ಲಾ ರಿಕಾರ್ಡುಗಳನ್ನೂ ನೋಡಿ ಸಾಲವನ್ನು ಮಂಜೂರು ಮಾಡುತ್ತೀರಿ. ಈಗ ಸುಮಾರು 1,300 ಅರ್ಜಿಗಳು ಬಂದಿದ್ದರೂ ಅವುಗಳ ಪೈಕಿ 443 ಅರ್ಜಿಗಳಿಗೆ ರಿಕಾರ್ಡು ಬಿರ್ಡ್‌ಪ್ ಮಾಡಿದ್ದೀರಿ. ಇನ್ನು

ಳಿದ ಅರ್ಜಿಗಳಿಗೆ ಎಷ್ಟು ಹಣ ಬೇಕೆಂಬ ಬಗ್ಗೆ ಒಂದು ಪರಿಶೀಲನೆಯನ್ನು ಕರಿಸಿಕೊಂಡು ಹಾಗ್ಗೆ ಎಲ್ಲ ಅರ್ಜಿದಾರರಿಗೂ ಸಾಲವನ್ನು ಮಂಜೂರು ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಸಾಧ್ಯವಾದಷ್ಟು ಹಣವನ್ನು ಒದಗಿಸಿ ಸಾಲಗಳನ್ನು ಮಂಜೂರು ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆಂದು ಆಗಲೇ ಹೇಳಿದ್ದೇನೆ.

Irrigation Works in Chickballapur

*Q.—181. Sri K. M. PUTTASWAMY (Chickballapur).—

Will the Minister for Public Works be pleased to state:—

(*a*) the irrigation works sanctioned to Chickballapur Taluk and B. Palya Hobli, Gauribidnur Taluk (Hobliwise details may please be furnished);

(*b*) the reasons for not yet taking up the works relating to tanks, canals and pick-ups for which estimates have either been sanctioned or arrangements have been made for the sanction of the same?

*A.—Sri ALUR HANUMANTHAPPA (Deputy Minister for Minor Irrigation)—

(*a*) Statements I and II appended.

(*b*) All the sanctioned works are under execution.